# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 21-03-2020 ರಂದು ಅಪರಾಹ್ನ 04.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 54ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ಲಿಂಗರಾಜ ಗಾಂಧಿ**<br>ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಡಾ. ತೇಜಸ್ವಿ ನವಿಲೂರು**<br>ಡೀನ್ (ಶೈಕ್ಷಣಿಕ) (ಕಾ.ಭಾ)ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ. ಕವಿತ ರೈ**<br>ಕುಲಸಚಿವ (ಪರೀಕ್ಷಾಂಗ) (ಕಾ.ಭಾ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಕಾಂಬ್ಳೆ ಅಶೋಕ**<br>ಡೀನ್ (ಅಧ್ಯಯನ ಕೇಂದ್ರ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ. ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗೂ<br>ಸಂಶೋಧನಾ ವಿಭಾಗ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>CIQA ನಿರ್ದೇಶಕರು<br>ಕರಾಮುವಿ, ಮೈಸೂರು. | |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 54ನೇ ಶೈಕ್ಷಣಿಕ ಮಂಡಳಿ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ಡೀನ್ ಶೈಕ್ಷಣಿಕ ರವರಿಗೆ ಸೂಚಿಸಿದರು.

ಕುಲಪತಿಗಳು ಕುಲಸಚಿವ

## ವಿಷಯ ಸಂಖ್ಯೆ:54.01

**ವಿಷಯ:** ಪಿಎಚ್.ಡಿ. ಆದ್ಯಾದೇಶ 2012ರ ಪ್ರಕಾರ 2014–15ನೇ ಸಾಲಿನಲ್ಲಿ ವಿವಿಧ ವಿಷಯಗಳಲ್ಲಿ ತಾತ್ಕಾಲಿಕವಾಗಿ ನೋಂದಣಿಯಾಗಿರುವ ವಿದ್ಯಾರ್ಥಿಗಳ ನೋಂದಣಿ ಮಾಡುವ ಬಗ್ಗೆ.

******

ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ. ಆದ್ಯಾದೇಶ 2012ರ ಪ್ರಕಾರ ಪಿಎಚ್.ಡಿ. ಕಾರ್ಯಕ್ರಮಕ್ಕೆ ವಿವಿಧ ವಿಷಯಗಳಲ್ಲಿ 2012–13ನೇ ಸಾಲಿನ ಪ್ರವೇಶ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆಯ ಮೂಲಕ ಆಯ್ಕೆಗೊಂಡಿರುವ ವಿದ್ಯಾರ್ಥಿಳಿಗೆ 2014–15ನೇ ಸಾಲಿನಲ್ಲಿ ಪಿಎಚ್.ಡಿ.ಗೆ ತಾತ್ಕಾಲಿಕ ನೋಂದಣಿ ಮಾಡಲಾಗಿದ್ದು, ಸದರಿ ವಿದ್ಯಾರ್ಥಿಗಳಿಗೆ ಪಿಎಚ್.ಡಿ. ಕೋರ್ಸ್‌ವರ್ಕ್ ಪರೀಕ್ಷೆಯನ್ನು ನವೆಂಬರ್/ಡಿಸೆಂಬರ್ 2015ರ ಮಾಹೆಯಲ್ಲಿ ನಡೆಸುವ ಸಲುವಾಗಿ ದಿನಾಂಕ: 28–09–2015 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. (ಅನುಬಂಧ – 'ಅ')

ದಿನಾಂಕ: 16–06–2015 ರಂದು ಯು.ಜಿ.ಸಿ. ಯು ಸಾರ್ವಜನಿಕ ಪ್ರಕಟಣೆಯ ಸಂಖ್ಯೆ: F.No. UGC/DEB/8/KSOU/1/2016 ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2012–13ನೇ ಸಾಲಿನ ನಂತರ ನೀಡಿರುವ ಮಾನ್ಯತೆಯನ್ನು ಹಿಂಪಡೆಯಲಾಗಿದೆ ಎಂದು ತಿಳಿಸಿರುತ್ತಾರೆ. (ಅನುಬಂಧ – 'ಆ') ಅದರಂತೆ ವಿಶ್ವವಿದ್ಯಾನಿಲಯದ ಎಲ್ಲಾ ಕಾರ್ಯಕ್ರಮಗಳಂತೆ ಪಿಎಚ್.ಡಿ. ಕಾರ್ಯಕ್ರಮವನ್ನು ಸಹ ತಾತ್ಕಾಲಿಕವಾಗಿ ತಡೆಹಿಡಿಯುವಂತೆ ಮಾನ್ಯ ಕುಲಪತಿಗಳ ಸೂಚನೆ ಮೇರೆಗೆ ಕೋರ್ಸ್‌ವರ್ಕ್ ಪರೀಕ್ಷೆಯನ್ನು ಮುಂದೂಡಲಾಗಿರುತ್ತದೆ. (ಅನುಬಂಧ – 'ಇ')

2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ಮಾನ್ಯತೆ ಬಂದ ನಂತರ ಸ್ಥಗಿತಗೊಂಡಿರುವ, ಪಿಎಚ್.ಡಿ. ಕಾರ್ಯಕ್ರಮದಲ್ಲಿ ನೋಂದಣಿಯಾಗಿರುವ ವಿದ್ಯಾರ್ಥಿಗಳ ಸಂಶೋಧನೆಯನ್ನು ಮುಂದುವರೆಸುವ ಸಲುವಾಗಿ ಡೀನ್(ಶೈಕ್ಷಣಿಕ) ರವರ ನೇತೃತ್ವದಲ್ಲಿ ಪಿಎಚ್.ಡಿ. ಸಮಿತಿಯೊಂದನ್ನು ರಚಿಸಿ ಸದರಿ ಸಮಿತಿಯು ದಿನಾಂಕ:23–03–2019 ರಂದು ನೀಡಿರುವ ವರದಿಯನ್ವಯ ಹೊರಡಿಸಿರುವ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಪವಿ/ಪಿಚ್.ಡಿ/69/2019–20, ದಿನಾಂಕ: 06–07–2019 ರಂದು ಜಾರಿಗೆ ಬಂದಂತೆ ಮುಂದುವರೆಸಲಾಗಿರುತ್ತದೆ. (ಅನುಬಂಧ – 'ಈ')

2014–15ನೇ ಸಾಲಿನಲ್ಲಿ ತಾತ್ಕಾಲಿಕ ನೋಂದಣಿಯಾಗಿರುವ ವಿದ್ಯಾರ್ಥಿಗಳಿಗೆ ಅಕ್ಟೋಬರ್ 2019ರ ಮಾಹೆಯಲ್ಲಿ ಪಿಎಚ್.ಡಿ. ಕೋರ್ಸ್‌ವರ್ಕ್ ಪರೀಕ್ಷೆಯನ್ನು ನಡೆಸಲಾಗಿ ಪರೀಕ್ಷೆಯಲ್ಲಿ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳಿಗೆ ಪಿಎಚ್.ಡಿ. ನೋಂದಣಿಯ ಅಧಿಸೂಚನೆ ಹೊರಡಿಸಬೇಕಾಗಿದ್ದು, ಪಿಎಚ್.ಡಿ. ಆದ್ಯಾದೇಶ 2012 ರಲ್ಲಿ ತಾತ್ಕಾಲಿಕ ನೋಂದಣಿ ಹೊಂದಿದ ದಿನಾಂಕದಿಂದ ಪೂರ್ಣ ಅವಧಿ (full time) ವಿದ್ಯಾರ್ಥಿಗಳಿಗೆ ಕನಿಷ್ಠ 03 ವರ್ಷ, ಗರಿಷ್ಠ 05 ವರ್ಷ ಹಾಗೂ ಅರೆಕಾಲಿಕ (part time) ವಿದ್ಯಾರ್ಥಿಗಳಿಗೆ ಕನಿಷ್ಠ 04 ವರ್ಷ, ಗರಿಷ್ಠ 06 ವರ್ಷ ಅವಧಿಯೊಳಗೆ ಮಹಾಪ್ರಬಂಧ ಮಂಡಿಸಬೇಕು ಎಂಬ ನಿಯಮವಿರುತ್ತದೆ. (2012ರ ಆದ್ಯಾದೇಶ ಪ್ರತಿ ಅನುಬಂಧ – 'ಉ')

ಪಿಎಚ್.ಡಿ. ವಿದ್ಯಾರ್ಥಿಗಳಿಗೆ 2015 ರಲ್ಲಿ ತಾತ್ಕಾಲಿಕ ನೋಂದಣಿ ಮಾಡಲಾಗಿದ್ದು 2019 ರಲ್ಲಿ ನಡೆದ ಪಿಎಚ್.ಡಿ. ಕೋರ್ಸ್‌ವರ್ಕ್ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ್ದ ವಿದ್ಯಾರ್ಥಿಗಳಿಗೆ ನಿಯಮಾವಳಿ ಪ್ರಕಾರ ತಾತ್ಕಾಲಿಕ ನೋಂದಣಿ ಹೊಂದಿದ ದಿನಾಂಕದಿಂದ ಅಧಿಸೂಚನೆ ಹೊರಡಿಸಬೇಕಾಗಿದ್ದು 2015 (16–06–2015) ರಿಂದ 2019(06–07–2019) ರವರೆಗಿನ ಅಂತರದಲ್ಲಿ ಪಿಎಚ್.ಡಿ. ಕಾರ್ಯಕ್ರಮವನ್ನು ಮಾನ್ಯತೆ ಬಿಕ್ಕಟ್ಟಿನಿಂದ ಯಾವುದೇ ಕ್ರಮವಹಿಸದೆ ಇರುವುದರಿಂದ ಈ 04 ವರ್ಷಗಳ ಅವಧಿಯನ್ನು ಯಾವ ರೀತಿ ಪರಿಗಣಿಸಬೇಕು ಎಂಬುದರ ಬಗ್ಗೆ ಶೈಕ್ಷಣಿಕ ಮಂಡಳಿಯ ಮುಂದೆ ವಿಷಯ ಮಂಡಿಸಲಾಗಿದೆ.

ಕುಲಪತಿಗಳು | ಕುಲಸಚಿವರು

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

ತೀರ್ಮಾನ: ಪಿಎಚ್.ಡಿ. ಆಧ್ಯಾದೇಶ 2012ರ ಪ್ರಕಾರ ಮತ್ತು ಆ ಹಿಂದೆ ಹೊರಡಿಸಲಾಗಿದ್ದ ಪಿ.ಹೆಚ್.ಡಿ ಪ್ರವೇಶಾತಿ ಅಧಿಸೂಚನೆಗೆ ಅನುಗುಣವಾಗಿ ಅರ್ಜಿಯನ್ನು ಸಲ್ಲಿಸಿ, 2014–15ನೇ ಸಾಲಿನವರೆಗೆ **Regular Mode**ನಲ್ಲಿ ವಿವಿಧ ವಿಷಯಗಳಲ್ಲಿ ಪಿ.ಹೆಚ್.ಡಿ. ಕಾರ್ಯಕ್ರಮಕ್ಕೆ ಆಯ್ಕೆಗೊಂಡು ತಾತ್ಕಾಲಿಕವಾಗಿ ನೋಂದಣಿಯಾಗಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಮಾನ್ಯತೆ ಬಿಕ್ಕಟ್ಟಿನ ಅವಧಿಯನ್ನು ಮನ್ನಾಗೊಳಿಸಿ ನಿಯಮಾನುಸಾರ ಮರು ನೋಂದಣಿ ಮಾಡಿಕೊಂಡು **Course Work** ಹಾಗೂ ಇನ್ನಿತರ ಶೈಕ್ಷಣಿಕ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಅವಕಾಶ ನೀಡಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:54.02**

ವಿಷಯ: ನಿರ್ವಹಣಾಶಾಸ್ತ್ರಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರನ್ನು (ಪ್ರಭಾರ) ನೇಮಕಾತಿ ಮಾಡಿರುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ ಡಾ. ಸಿ. ಮಹದೇವಮೂರ್ತಿ, ಸಹ ಪ್ರಾಧ್ಯಾಪಕರು, ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸದರಿ ವಿಭಾಗದ ಆಡಳಿತಾತ್ಮಕ ಹಿತದೃಷ್ಟಿಯಿಂದ ಹಿರಿಯ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ. ಹೆಚ್. ರಾಜೇಶ್ವರಿ ಇವರನ್ನು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಯ ಅನುಮೋದನೆ ಕಾಯ್ದಿರಿಸಿಕೊಂಡು, ಆದೇಶ ಸಂಖ್ಯೆ: ಕರಾಮುವಿ/ಡೀನ್ (ಶೈ)–04/2019–20, ದಿನಾಂಕ: 24–01–2020 ರ ಪ್ರಕಾರ ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರ(ಪ್ರಭಾರ) ನೇಮಕಾತಿ ಮಾಡಲಾಗಿದೆ.

ಪ್ರಸ್ತುತ, ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅವಗಾಹನೆಗೆ ತರುತ್ತಾ ಈ ಬಗ್ಗೆ ಅನುಸಮರ್ಥನೆಕೋರಿ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

ತೀರ್ಮಾನ:

ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ ಡಾ. ಸಿ.ಮಹದೇವಮೂರ್ತಿ ಅವರನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ವಿಭಾಗದ ಅಧ್ಯಾಪಕರ ಹುದ್ದೆಯಿಂದ ಬಿಡುಗಡೆಗೊಳಿಸಿ ಹಿರಿಯ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ. ಹೆಚ್.ರಾಜೇಶ್ವರಿ ಇವರನ್ನು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಅನುಮೋದನೆಯನ್ನು ಕಾಯ್ದಿರಿಸಿಕೊಂಡು ವಿಭಾಗದ ಅಧ್ಯಕ್ಷರ ಹುದ್ದೆಗೆ (ಪ್ರಭಾರ) ಮಾಡಿದ ನೇಮಕಾತಿಯನ್ನು ಅನುಮೋದಿಸಲಾಯಿತು.

ಕುಲಪತಿಗಳು

ಕುಲಸಚಿವರು

**ವಿಷಯ ಸಂಖ್ಯೆ:54.03**

ವಿಷಯ: ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರನ್ನು ನೇಮಕಾತಿ ಮಾಡಿರುವ ಬಗ್ಗೆ.

****

ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆಆವರ್ತನ ಪದ್ಧತಿಯ ಅನುಸಾರ ಡಾ.ಅಶೋಕ್ ಕಾಂಬ್ಳೆ, ಪ್ರಾಧ್ಯಾಪಕರು, ಇವರನ್ನು ದಿನಾಂಕ: 15-05-2008 ರಿಂದ ಜಾರಿಗೆ ಬಂದಂತೆ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿತ್ತು. ಪ್ರಸ್ತುತ, ಸದರಿ ಪ್ರಾಧ್ಯಾಪಕರನ್ನು ಡೀನ್ (ಅಧ್ಯಯನಕೇಂದ್ರ)ರಾಗಿ ನೇಮಕ ಮಾಡಲಾಗಿದೆ. ಹಾಗಾಗಿ, ತೆರವಾದ ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರ ಸ್ಥಾನಕ್ಕೆ ಡಾ. ಪ್ರಭುಸೇನ ಡಿ, ಸಹಾಯಕ ಪ್ರಾಧ್ಯಾಪಕರು, ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು, ಇವರನ್ನು ಆದೇಶ ಸಂಖ್ಯೆ: ಕರಾಮುವಿ/ಡೀನ್ (ಶೈ)-07/2019-20, ದಿನಾಂಕ: 07-02-2020 ರ ಪ್ರಕಾರ ಶೈಕ್ಷಣಿಕ ಮಂಡಳಿ ಅನುಮೋದನೆಯನ್ನು ಕಾಯ್ದಿರಿಸಿ, ಮುಂದಿನ ಆದೇಶದವರೆಗೆ ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರ ನೇಮಕಾತಿ ಮಾಡಲಾಗಿದೆ.

ಪ್ರಸ್ತುತ, ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅವಗಾಹನೆಗೆ ತರುತ್ತಾ ಈ ಬಗ್ಗೆ ಅನುಸಮರ್ಥನೆಕೋರಿ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**<u>ತೀರ್ಮಾನ:</u> ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರನ್ನಾಗಿ ಡಾ. ಪ್ರಭುಸೇನ ರವರ ನೇಮಕಾತಿ ಮತ್ತು ಡಾ. ಕಾಂಬ್ಳೆ ಅಶೋಕ ರವರನ್ನು ಡೀನ್ (ಅಧ್ಯಯನ ಕೇಂದ್ರ) ಇವರ ನೇಮಕಾತಿ ಆದೇಶಗಳಿಗೆ ಅನುಸಮರ್ಥನೆಯನ್ನು ನೀಡಲಾಯಿತು.**

**ವಿಷಯ ಸಂಖ್ಯೆ:54.04**

ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತಗೊಂಡಿರುವ ಡಾ. ಬಾಬು ಜಗಜೀವನರಾಮ್ ಪೀಠವನ್ನು ಡಾ. ಬಾಬು ಜಗಜೀವನರಾಮ್ ಅಧ್ಯಯನ, ವಿಸ್ತರಣಾ ಮತ್ತು ಸಂಶೋಧನಾ ಕೇಂದ್ರವಾಗಿ ರೂಪಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2012ರ ಸಾಲಿನಲ್ಲಿ ಡಾ.ಬಾಬು ಜಗಜೀವನರಾಮ್ ಪೀಠವು ಸ್ಥಾಪಿತಗೊಂಡು ಅನಂತರದ ದಿನಗಳಲ್ಲಿ ಅಧಿಕೃತವಾಗಿ 2015ನೇ ಸಾಲಿನಲ್ಲಿ ಪೀಠವು ಉದ್ಘಾಟನೆಯಾಗಿರುತ್ತದೆ. ಅನಂತರದ ದಿನಗಳಲ್ಲಿ ಡಾ.ಬಾಬು ಜಗಜೀವನರಾಮ್ ಪೀಠದ ಹಲವು ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಡಾ. ಬಾಬು ಜಗಜೀವನರಾಮ್ ಪೀಠದ ವತಿಯಿಂದ ವಿಶ್ವವಿದ್ಯಾನಿಲಯದಲ್ಲಿ ಹಲವಾರು ಕೋರ್ಸು ಹಾಗೂ ಸಂಶೋಧನಾ ಕಾರ್ಯಗಳನ್ನು ಪ್ರಾರಂಭಿಸಬೇಕಾಗಿರುವುದರಿಂದ ಸದರಿ ಪೀಠವನ್ನು ಡಾ.ಬಾಬು ಜಗಜೀವನರಾಮ್ ಅಧ್ಯಯನ, ವಿಸ್ತರಣಾ ಮತ್ತು ಸಂಶೋಧನಾ ಕೇಂದ್ರವಾಗಿ ರಚಿತವಾಗಲು

ಕುಲಪತಿಗಳು

ಕುಲಸಚಿವರು

ಅನುಕೂಲವಾಗುವಂತೆ, ಹಾಗೂ ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರಿಂದ ಸದರಿ ಪೀಠದ ಕಾರ್ಯಕ್ರಮಗಳನ್ನು ಉನ್ನತ ಮಟ್ಟಕ್ಕೆ ಕೊಂಡೂಯ್ಯಲು ಉಪಯೋಗವಾಗುವಂತೆ ಡಾ.ಬಾಬು ಜಗಜೀವನರಾಮ್ ಪೀಠವನ್ನು, ಡಾ.ಬಾಬು ಜಗಜೀವನರಾಮ್ ಅಧ್ಯಯನ, ವಿಸ್ತರಣಾ ಮತ್ತು ಸಂಶೋಧನಾ ಕೇಂದ್ರ ಎಂದು ಬದಲಾವಣೆ ಮಾಡಿಕೊಡಲು ಅನುಕೂಲವಾಗುವಂತೆ 54ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ವಿಷಯವನ್ನು ಅನುಮೋದನೆಗಾಗಿ ಮಂಡಿಸಲಾಗಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**<u>ತೀರ್ಮಾನ:</u> ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತಗೊಂಡಿರುವ ಡಾ. ಬಾಬು ಜಗಜೀವನರಾಮ್ ಪೀಠದ ಕಾರ್ಯಚಟುವಟಿಕೆಗಳನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಪೀಠದ ಹೆಸರನ್ನು ಡಾ. ಬಾಬು ಜಗಜೀವನರಾಮ್ ಅಧ್ಯಯನ, ವಿಸ್ತರಣಾ ಮತ್ತು ಸಂಶೋಧನಾ ಕೇಂದ್ರ ಎಂದು ಬದಲಾವಣೆ ಮಾಡಿಕೊಳ್ಳಲು ಅನುಮೋದನೆ ನೀಡಲಾಯಿತು..**

**ವಿಷಯ ಸಂಖ್ಯೆ:54.05**

ವಿಷಯ: 2019–20ರ ಜನವರಿ ಆವೃತ್ತಿಯ ಬಿ.ಇಡಿ ಶಿಕ್ಷಣಕ್ರಮಕ್ಕೆ ಪ್ರವೇಶ ಪರೀಕ್ಷೆ ಮೂಲಕ ಹಾಗೂ ಸೀಟ್ ಮ್ಯಾಟ್ರಿಕ್ಸ್ ಅನ್ವಯ ರ್‍ಯಾಂಕ್ ಆಧಾರದ ಮೇಲೆ ಪ್ರವೇಶ ಮಾಡಿರುವ ಕುರಿತು:

****

2019–20ರ ಜನವರಿಆವೃತ್ತಿಯ ಪ್ರವೇಶಾತಿಗೆ ದಿನಾಂಕ:12.12.2019ರಂದು ಪ್ರಕಟಣೆಯನ್ನು ಹೊಡಿಸಲಾಗಿತ್ತು. ಪ್ರವೇಶಾತಿಯ ಸಂಪೂರ್ಣ ಪ್ರಕ್ರಿಯೆಯನ್ನುಆನ್‌ಲೈನ್ ಮೂಲಕ ಮಾಡಲಾಗಿರುತ್ತದೆ.ಅದರಂತೆ, ಬಿ.ಇಡಿ ಶಿಕ್ಷಣಕ್ರಮದ ಪ್ರವೇಶಾತಿಯನ್ನು ಎನ್.ಸಿ.ಟಿ.ಇ ನಿಗದಿಪಡಿಸಿರುವ 500 ಸೀಟುಗಳ ಪ್ರವೇಶಾತಿಗೆ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಸಂಬಂಧದಲ್ಲಿಆನ್‌ಲೈನ್ ಮೂಲಕ ಅರ್ಜಿ ಹಾಕಿದ್ದ 3931 ಅಭ್ಯರ್ಥಿಗಳಿಗೆ ದಿನಾಂಕ:02.02.2020ರಂದು ಪ್ರವೇಶ ಪರೀಕ್ಷೆ ನಡೆಸಲಾಗಿ, ಅಭ್ಯರ್ಥಿಗಳು ಪಡೆದ ಅಂಕಗಳ (ರ್‍ಯಾಂಕ್ ಲಿಸ್ಟ್) ಪಟ್ಟಿಯನ್ನು ವಿವಿ ನಿಲಯದಅಧಿಕೃತಅಂತರ್ಜಾಲದಲ್ಲಿ ದಿನಾಂಕ: 19.02.2020ರಂದು ಪ್ರಕಟಿಸಲಾಗಿರುತ್ತದೆ.

ಅರ್ಹ ಅಭ್ಯರ್ಥಿಗಳನ್ನು ಮೀಸಲಾತಿ / ರ್‍ಯಾಂಕ್‌ಆಧಾರದ ಮೇಲೆ ಆಯ್ಕೆ ಮಾಡುವ ಸಂಬಂಧದಲ್ಲಿರಚಿತವಾಗಿದ್ದಆಯ್ಕೆ ಸಮಿತಿಯು ದಿನಾಂಕ:20.02.2020 ರಂದು ಸಭೆ ಸೇರಿ, 2019–20ರ ವಿವರಣಾ ಪುಸ್ತಕದಲ್ಲಿರುವಂತೆ ವಿವಿಧ ವರ್ಗಗಳಲ್ಲಿನ ಮೀಸಲಾತಿಅನ್ವಯ (ಸೀಟ್ ಮ್ಯಾಟ್ರಿಕ್ಸ್) ಆಯಾ ವರ್ಗದಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪಟ್ಟಿಯನ್ನು ಸಿದ್ಧಪಡಿಸಿಕೊಂಡು, ದಿನಾಂಕ:24.02.2020 ಮತ್ತು 25.02.2020ರ ಎರಡು ದಿನಗಳಲ್ಲಿ ಪ್ರತೀ ದಿನಕ್ಕೆ 250 ಅಭ್ಯರ್ಥಿಗಳಿಗೆ ಕೌನ್ಸಲಿಂಗ್ ನಡೆಸಲು ತೀರ್ಮಾನಿಸಿ, ಆಯ್ಕೆ ಪಟ್ಟಿಯನ್ನು ದಿನಾಂಕ:20.02.2020ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಯಿತು.

ನಂತರ ದಿನಾಂಕ:24.02.2020 ಮತ್ತು 25.02.2020ರ ಎರಡು ದಿನಗಳಲ್ಲಿ ಪ್ರತೀ ದಿನಕ್ಕೆ 250 ಅಭ್ಯರ್ಥಿಗಳಿಗೆ ಕೌನ್ಸಲಿಂಗ್ ನಡೆಸಲಾಗಿಒಟ್ಟಾರೆ 411 ವಿದ್ಯಾರ್ಥಿಗಳು ಪ್ರವೇಶ ಪಡೆದು, ಡೀನ್(ಅಧ್ಯಯನಕೇಂದ್ರ)ವು ನೀಡಿದ್ದ 10 ವಿವಿಧ ಕಲಿಕಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

ಕುಲಪತಿಗಳು

ಕುಲಸಚಿವರು

ಉಳಿದ್ದ 89 ಸೀಟುಗಳಿಗೆ ಆಯಾ ವರ್ಗದಲ್ಲಿರ್‍ಯಾಂಕ್‌ನಲ್ಲಿಜೇಷ್ಠತೆ ಹೊಂದಿರುವ ನಂತರದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಬಂಧ ದಿನಾಂಕ:26.02.202ರಂದು ಆಯ್ಕೆ ಸಮಿತಿಯು ಸಭೆ ಸೇರಿ, ಎರಡನೇ ಪಟ್ಟಿಯನ್ನುಕಾಯ್ದಿರಿಸುವ ಪಟ್ಟಿಯೊಂದಿಗೆ ಅಂತಿಮಗೊಳಿಸಿ, ಈ ವಿದ್ಯಾರ್ಥಿಗಳಿಗೆ ದಿನಾಂಕ:28.02.2020ರಂದು ಕೌನ್ಸಲಿಂಗ್ ಮಾಡಲುಆಯ್ಕೆ ಸಮಿತಿಯು ತೀರ್ಮಾನಿಸಿದಂತೆ ದಿನಾಂಕ:27.02.2020ರಂದು 89 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಹಾಗೂ ಅಷ್ಟೇ ಅಭ್ಯರ್ಥಿಗಳ ಕಾಯ್ದಿರಿಸಿದ ಪಟ್ಟಿಯನ್ನುಅಂತರ್ಜಾಲದಲ್ಲಿ ಪ್ರಕಟಗೊಳಿಸಿ ದಿನಾಂಕ:28.02.2020ರಂದು ಕೌನ್ಸಲಿಂಗ್ ಬರುವಂತೆ ಸೂಚನೆ ನೀಡಲಾಗಿದ್ದಿತು.

ಅದರಂತೆ, ದಿನಾಂಕ:28.02.2020ರಂದು ನಡೆದಕೌನ್ಸಲಿಂಗ್‌ನಲ್ಲಿ 84 ಅಭ್ಯರ್ಥಿಗಳು (ಕಾಯ್ದಿರಿಸಿದ ಪಟ್ಟಿಯಲ್ಲಿನ ಕೆಲವು ಅಭ್ಯರ್ಥಿಗಳನ್ನೂ ಸೇರಿದಂತೆ) ಆಯ್ಕೆಗೊಂಡು ಪ್ರವೇಶಾತಿ ಪಡೆದಿರುತ್ತಾರೆ. ಉಳಿದ 05 ಸೀಟುಗಳಿಗೆ ಆಯಾ ವರ್ಗದಡಿ ನಂತರದರ್‍ಯಾಂಕ್ ಹೊಂದಿರುವ ವಿದ್ಯಾರ್ಥಿಗಳಿಗೆ ಸೂಚನೆ ನೀಡಿ, ಅವರುಗಳು ದಿನಾಂಕ: 29.02.2020ರಂದು ಪ್ರವೇಶ ಪಡೆಯುವ ಮೂಲಕ ಒಟ್ಟಾರೆ ನಿಗದಿತ 500 ಸೀಟುಗಳಿಗೂ ಅರ್ಹ ಅಭ್ಯರ್ಥಿಗಳು ಮೀಸಲಾತಿಅನ್ವಯ ಹಾಗೂ ರ್‍ಯಾಂಕ್‌ಆಧಾರದ ಮೇಲೆ ಆಯ್ಕೆಗೊಂಡು (ಪಟ್ಟಿ ಲಗತ್ತಿಸಿದೆ) ಪ್ರವೇಶಾತಿ ಪಡೆದು ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ 10 ಕಲಿಕಾ ಕೇಂದ್ರಗಳಲ್ಲಿ ತಲಾ 50 ಅಭ್ಯರ್ಥಿಗಳಂತೆ ಆಯ್ಕೆಗೊಂಡು ಪ್ರವೇಶ ಹೊಂದಿರುತ್ತಾರೆ.

ಈ ಹಿನ್ನೆಲೆಯಲ್ಲಿ 2019-20ರ ಜನವರಿ 2020ರ ಆವೃತ್ತಿಯ ಬಿ.ಇಡಿ ಪ್ರವೇಶಾತಿಯ ಮೇಲಿನ ಎಲ್ಲಾ ಪ್ರಕ್ರಿಯೆಗಳನ್ನು ಮಾನ್ಯ ಶೈಕ್ಷಣಿಕ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಸದರಿ ಪ್ರಕ್ರಿಯೆಗೆ ಅನುಸಮರ್ಥನೆಕೋರಿ ವಿಷಯವನ್ನು ಸಭೆಗೆ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**ತೀರ್ಮಾನ: 2019-20ರ ಜನವರಿ ಆವೃತ್ತಿಯ ಬಿ.ಇಡ್ ಶಿಕ್ಷಣಕ್ರಮಕ್ಕೆ ಪ್ರವೇಶ ಪರೀಕ್ಷೆ ಮೂಲಕ ಹಾಗೂ ನಿಯಮಾನುಸಾರ ರಚಿಸಲಾಗಿರುವ ಸೀಟ್ ಮ್ಯಾಟ್ರಿಕ್ಸ್ ಅನ್ವಯ ರ್‍ಯಾಂಕ್ ಆಧಾರದ ಮೇಲೆ ಆಯ್ಕೆ ಮಾಡಲಾದ ವಿದ್ಯಾರ್ಥಿಗಳ ಎಲ್ಲಾ ಪ್ರವೇಶಾತಿ ಪ್ರಕ್ರಿಯೆಗಳಿಗೆ ಅನುಸಮರ್ಥನೆಯನ್ನು ನೀಡಲಾಯಿತು.**

**ವಿಷಯ ಸಂಖ್ಯೆ:54.06**

**ವಿಷಯ:** 2019-20ನೇ (ಜನವರಿ ಆವೃತ್ತಿ) ಸಾಲಿನ ಬಿ.ಇಡಿ ಶಿಕ್ಷಣಕ್ರಮದ ಪ್ರವೇಶಾತಿಗೆ ಪ್ರವೇಶ ಶುಲ್ಕವನ್ನು ನಿಗದಿಪಡಿಸಿರುವ ಬಗೆಗೆ:

*******

ವಿಶ್ವವಿದ್ಯಾನಿಲಯದ 2019-20ನೇ ಜನವರಿಆವೃತ್ತಿಯ ಪ್ರವೇಶಾತಿ ಸಂಬಂಧದಲ್ಲಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಶುಲ್ಕವನ್ನು ನಿಗದಿಪಡಿಸಿ ವಿಶ್ವವಿದ್ಯಾನಿಲಯದ ದಿನಾಂಕ:12.12.2019ರಲ್ಲಿ ಆದೇಶವನ್ನು ಹೊರಡಿಸಲಾಗಿದ್ದಿತು. ಸದರಿಆದೇಶದಲ್ಲಿ ಪ್ರಥಮ ಬಿ.ಇಡಿ., ಶಿಕ್ಷಣ ಕ್ರಮದ ಬೋಧನಾ ಶುಲ್ಕವು ರೂ. 16,400/- ಎಂತಲೂ, ದ್ವಿತೀಯ ಬಿ.ಇಡಿ., ಶಿಕ್ಷಣ ಕ್ರಮದ ಬೋಧನಾ ಶುಲ್ಕವು ರೂ. 17,000/- ಎಂದಿರುತ್ತದೆ.

ಕುಲಪತಿಗಳು

ಕುಲಸಚಿವರು

ಈ ಶುಲ್ಕವನ್ನುಕ್ರಮವಾಗಿ ಪ್ರಥಮ ವರ್ಷಕ್ಕೆ ಭೋಧನಾ ಶುಲ್ಕವು ರೂ.18,400/– ಎಂತಲೂ, ದ್ವಿತೀಯ ವರ್ಷಕ್ಕೆ ಭೋಧನಾ ಶುಲ್ಕವು ರೂ. 19,500/– ಗಳಿಗೆ ಪರಿಷ್ಕರಿಸಲು ಶಿಕ್ಷಣಶಾಸ್ತ್ರ ವಿಭಾಗದ ಪ್ರಸ್ತಾವನೆಯಂತೆ 2019–20 ರ ಜನವರಿ ಆವೃತ್ತಿಯ ವಿವರಣಾ ಪುಸ್ತಕದಲ್ಲಿ ಪರಿಷ್ಕರಿಸಲ್ಪಟ್ಟಿರುತ್ತದೆ.

ಮುಂದುವರೆದು, ದ್ವಿತೀಯ ಬಿ.ಇಡಿ., ಪ್ರವೇಶ ಶುಲ್ಕದಲ್ಲಿಕೌಶಲ್ಯಾಭಿವೃದ್ಧಿ ಶುಲ್ಕವಾದರೂ. 500/– ನಮೂದಾಗಿರುವುದಿಲ್ಲ. ಅದರಂತೆ ಶೈಕ್ಷಣಿಕ ಮಂಡಳಿ. ಹಣಕಾಸು ಸಮಿತಿ ಹಾಗೂ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, 2019–20ರ ವಿವರಣಾ ಪುಸ್ತಕದನುಸಾರಜನವರಿಆವೃತ್ತಿಯ ಪ್ರವೇಶಾತಿಗೆ ಮೇಲಿನ ಪರಿಷ್ಕೃತ ಬೋಧನಾ ಶುಲ್ಕವನ್ನೂ ಒಳಗೊಂಡಂತೆ ಪ್ರಥಮ ಸಾಲಿಗೆ ಒಟ್ಟಾರೆ 22,500/– (ಬೋಧನಾ ಶುಲ್ಕ: 18,400 + ಚಟುವಟಿಕೆ ಶುಲ್ಕ: 3,000 +ನೊಂದಣಿ ಶುಲ್ಕ: 600 + ಕೌಶಲ್ಯಾಭಿವೃದ್ಧಿ ಶುಲ್ಕ:500) ಗಳಂತೆ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕವನ್ನು ಪಾವತಿಸಿಕೊಳ್ಳಲಾಗಿರುತ್ತದೆ.

ಮುಂದುವರೆದು, ಅಂತೆಯೇ, ದ್ವಿತೀಯ ಬಿ.ಇಡಿಗೆ ಪರಿಷ್ಕೃತ ಬೋಧನಾ ಶುಲ್ಕವನ್ನು ಒಳಗೊಂಡಂತೆ ಪ್ರವೇಶಾತಿ ಶುಲ್ಕವಾಗಿ ಒಟ್ಟಾರೆ 20,000/– (ಬೋಧನಾ ಶುಲ್ಕ:19,500 + ಕೌಶಲ್ಯಾಭಿವೃದ್ಧಿ ಶುಲ್ಕ:500) ಗಳಂತೆ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕವನ್ನು ಪಾವತಿಸಿಕೊಳ್ಳಬೇಕಾಗಿರುತ್ತದೆ.

ಮೇಲಿನ ಅಂಶಗಳನ್ನು ಮಾನ್ಯ ಶೈಕ್ಷಣಿಕ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, 2019–20ರ ಜನವರಿಆವೃತ್ತಿಯ ವಿವರಣಾ ಪುಸ್ತಕದಲ್ಲಿ ನಮೂದಿಸಿರುವ ಪರಿಷ್ಕೃತದರದಲ್ಲಿ ಬಿ.ಇಡಿ ಪ್ರವೇಶಾತಿ ಶುಲ್ಕವನ್ನು ಪಡೆದಿರುವ ಪ್ರಕ್ರಿಯೆಗೆಅನುಸಮರ್ಥನೆಕೋರಿ ಶೈಕ್ಷಣಿಕ ಮಂಡಳಿ ಸಭೆಗೆ ವಿಷಯವನ್ನುಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

ತೀರ್ಮಾನ: 1) **2019–20ರ ಜನವರಿ ಆವೃತ್ತಿಯ ವಿವರಣಾ ಪುಸ್ತಕದಲ್ಲಿ ನಮೂದಿಸಿರುವ ಪರಿಷ್ಕೃತ ದರದಲ್ಲಿ ಬಿ.ಇಡ್ ಪ್ರವೇಶಾತಿ ಶುಲ್ಕವನ್ನು ಪಡೆದಿರುವ ಪ್ರಕ್ರಿಯೆಗೆ ಅನುಸಮರ್ಥನೆಯನ್ನು ನೀಡಲಾಯಿತು.**

2) **ಮುಂದುವರೆದು 2019–20ನೇ ಜನವರಿ ಶೈಕ್ಷಣಿಕ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ದ್ವಿತೀಯ ವರ್ಷದ ಬಿ.ಇಡ್ ಪ್ರವೇಶಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಆಯ್ಕೆ/ಪ್ರವೇಶಾತಿ ಪಟ್ಟಿಯನ್ನು ವಿಭಾಗದ ಮುಖ್ಯಸ್ಥರ ಸಹಿಯೊಂದಿಗೆ ಪ್ರವೇಶಾತಿ ವಿಭಾಗಕ್ಕೆ ಸಲ್ಲಿಸಲು ಅನುಮೋದಿಸಲಾಯಿತು.**

ಕುಲಪತಿಗಳು　　　　　　　　　　　　　　　　ಕುಲಸಚಿವರು

**ವಿಷಯ ಸಂಖ್ಯೆ:54.07**

ವಿಷಯ: 2020–2021ನೇ ಶೈಕ್ಷಣಿಕ ಸಾಲಿನಿಂದ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು Choice Based Credit System (CBCS) ನಲ್ಲಿರಚಿಸುವ ಸಂಬಂಧದ ಅಧ್ಯಾದೇಶದ ಪ್ರತಿ ಅನುಮೋದನೆಗೆ

****

ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2020–2021ನೇ ಶೈಕ್ಷಣಿಕ ಸಾಲಿನಿಂದ Choice Based Credit System (CBCS)ನ ಸ್ನಾತಕೋತ್ತರಕಾರ್ಯಕ್ರಮವನ್ನು ಪ್ರಾರಂಭಿಸಲು ಉದ್ದೇಶಿಸಿದ್ದು, ಸದರಿ ಸ್ನಾತಕೋತ್ತರ ಕಾರ್ಯಕ್ರಮಗಳ ಪ್ರಾರಂಭಕ್ಕೆ ನಿಯಮಾನುಸಾರ, ODL ನ ನಿಯಮಗಳ ಸೆಕ್ಷನ್26(1) ಕ್ಲಾಸ್ (j) ನ ಸೆಕ್ಷನ್ 12(5) ಯು.ಜಿ.ಸಿಯಕಾಯ್ದೆಯ 1956ರ ಗೆಜೆಟ್‌ನದಿನಾಂಕ: 23–06–2017ರ ಪ್ರಕಾರ ಕಾರ್ಯಕ್ರಮಗಳ ರೂಪರೇಷೆಗಳನ್ನು ಕ್ರೋಡಿಕರಿಸಿ, "Ordinance relating to CBCS" ಎಂಬ ಶೀರ್ಷಿಕೆಯಿಂದ ಅಧ್ಯಾದೇಶದಪ್ರತಿಯನ್ನು ರಚಿಸಿ ಸಿದ್ಧಪಡಿಸಲಾಗಿದೆ.

CBCS ನ ಸ್ನಾತಕೋತ್ತರ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ:

| ಕ್ರ. ಸಂ. | ಶೈಕ್ಷಣಿಕ ಕಾರ್ಯಕ್ರಮಗಳ ವಿವರ |
|---|---|
| 1 | ಎಂ.ಎ (ವಿವಿಧಸ್ನಾತಕೋತ್ತರ ಕಾರ್ಯಕ್ರಮಗಳು), ಎಂ.ಕಾಂ ಹಾಗು ಎಂ.ಎಸ್ಸಿ (ವಿವಿಧ ವಿಷಯಗಳು) |
| 2 | ಎಂ.ಬಿ.ಎ |

Choice Based Credit System (CBCS)ನಅಧ್ಯಾದೇಶದಕರಡು ಪ್ರತಿಯನ್ನುಶೈಕ್ಷಣಿಕ ಮಂಡಳಿ ಅನುಮೋದನೆಗೆಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**ತೀರ್ಮಾನ: 2020–2021ನೇ ಶೈಕ್ಷಣಿಕ ಸಾಲಿನಿಂದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅಧ್ಯಯನ ಸಾಮಗ್ರಿಗಳನ್ನು ಹಂತ ಹಂತವಾಗಿ Choice Based Credit System (CBCS)ನ ಪದ್ಧತಿಯಲ್ಲಿ ರಚಿಸುವ ಸಂಬಂಧದ ಅಧ್ಯಾದೇಶದ ಪ್ರತಿಗೆ ಅನುಮೋದನೆ ನೀಡಲಾಯಿತು**

**ವಿಷಯ ಸಂಖ್ಯೆ: 54.08**

ವಿಷಯ: 2018–19 ಮತ್ತು 2019–20ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರಾಜ್ಯದ ವಿವಿದೆಡೆಕೌಶಲ್ಯಾಭಿವೃದ್ಧಿತರಬೇತಿ ತರಗತಿಗಳನ್ನು ಹಮ್ಮಿಕೊಳ್ಳುವ ಬಗೆಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2018–19 ಮತ್ತು 2019–20ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರಾಜ್ಯದ ವಿವಿಧೆಡೆ ಕೌಶಲ್ಯಾಭಿವೃದ್ಧಿ ತರಬೇತಿ

ಕುಲಪತಿಗಳು ಕುಲಸಚಿವರು

ತರಗತಿಗಳನ್ನು ಹಮ್ಮಿಕೊಳ್ಳಲು ಸುಮಾರು ರೂ.11,85,350/- (ಹನ್ನೊಂದು ಲಕ್ಷದಎಂಭತ್ತೈದು ಸಾವಿರದ ಮೂರು ನೂರ ಐವತ್ತು ರೂಪಾಯಿಗಳು ಮಾತ್ರ) ಗಳು ವೆಚ್ಚವಾಗಲಿದ್ದು, ಎಲ್ಲಾ ಕೇಂದ್ರಗಳಿಗೆ ಒಂದು ದಿನಕ್ಕೆ ಒಂದುಕಂಪ್ಯೂಟರ್‌ಗಳ ಬಾಡಿಗೆದರ ರೂ.175/- ಹಾಗು ಜನರೇಟರ್‌ನದರಒಂದು ದಿನಕ್ಕೆ ರೂ.1,000/- ಬಾಡಿಗೆದರದಂತೆ ನೀಡಲು, ಸದರಿ ವಿಷಯವನ್ನು ಕರಾಮುವಿಯ ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ ಅನುಮೋದನೆಗೆ ಮತ್ತು ತೀರ್ಮಾನವನ್ನು ಕೋರಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**ತೀರ್ಮಾನ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2018-19 ಮತ್ತು 2019-20ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರಾಜ್ಯದ ವಿವಿಧ ಕಡೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮತ್ತು ನಿಗಧಿಪಡಿಸಲಾಗಿರುವ ಕಂಪ್ಯೂಟರ್ ಬಾಡಿಗೆ ದರ ಹಾಗೂ ಜನರೇಟರ್ ಬಾಡಿಗೆ ದರಗಳನ್ನು 54ನೇ ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು.**

**ವಿಷಯ ಸಂಖ್ಯೆ:54.09**

ವಿಷಯ: ಎಂ.ಬಿ.ಎ. ಸಾಮಾನ್ಯ ಪ್ರವೇಶ ಪರೀಕ್ಷೆಯ ಶುಲ್ಕದ ಸಿಂಧುತ್ವ ಅವಧಿ ವಿಸ್ತರಿಸುವ ಕುರಿತು.

* * * * *

ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಎಂ.ಬಿ.ಎ. ಕಾರ್ಯಕ್ರಮಕ್ಕೆ ಈ ಮೊದಲು ವಾರ್ಷಿಕವಾಗಿ ಪ್ರವೇಶಾತಿ ಮಾಡಿಕೊಳ್ಳುತ್ತಿದ್ದು. ಪ್ರಸ್ತುತ 2018-19ನೇ ಶೈಕ್ಷಣಿಕ ಸಾಲಿನಿಂದಗಉಅ ನಿಯಮಾವಳಿಗಳ ಅನ್ವಯ ವಾರ್ಷಿಕ **ಮೊದಲ ಅವೃತ್ತಿ ಜುಲೈ, ಎರಡನೇ ಆವೃತ್ತಿ ಜನವರಿ.**ಈ ಎರಡು ಆವೃತ್ತಿಗಳಿಗೂ ಪ್ರತ್ಯೇಕವಾಗಿಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ, ಅರ್ಹರಾದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಲಾಗುತ್ತಿದೆ.

ಆದರೆ, ಕೆಲವು ವಿದ್ಯಾರ್ಥಿಗಳು ಮೊದಲ ಜುಲೈಆವೃತ್ತಿಯಲ್ಲಿ ಪ್ರವೇಶ ಪರೀಕ್ಷಾ ಶುಲ್ಕ ಪಾವತಿಸಿ ಪರೀಕ್ಷೆ ಬರೆಯದೇಇರುವ ನಿದರ್ಶನಗಳಿವೆ ಹಾಗೂ ಮೊದಲ ಆವೃತ್ತಿಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ಬರೆದುಅರ್ಹರಾದ ವಿದ್ಯಾರ್ಥಿಗಳು ಆ ಆವೃತ್ತಿಯಲ್ಲಿಯೇ ಪ್ರವೇಶಾತಿ ಪಡೆಯದೇ ಮುಂದಿನ ಜನವರಿಆವೃತ್ತಿಯಲ್ಲಿ ಪ್ರವೇಶಾತಿ ಬಯಸುವ ನಿದರ್ಶನಗಳಿವೆ. ಹಾಗಾಗಿ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಮತ್ತು ಎಂ.ಬಿ.ಎ. ವ್ಯಾಸಂಗದ ವಿದ್ಯಾರ್ಥಿಗಳ ಸಂಖ್ಯೆಯನ್ನು ವೃದ್ಧಿಸುವ ಸದುದ್ದೇಶದಿಂದ ಈ ಕೆಳಕಂಡ ಅಂಶಗಳ ಬಗೆಗೆ ಚರ್ಚೆ ಹಾಗೂ ಸೂಕ್ತ ನಿರ್ಧಾರ ತೆಗೆದು ಕೊಂಡು ಶಾಸನಬದ್ಧ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ಈ ಬಗ್ಗೆಅಧಿಸೂಚನೆ ಹೊರಡಿಸಬೇಕಾಗಿದೆ.

**ಕುಲಪತಿಗಳು** **ಕುಲಸಚಿವರು**

1. ಒಂದು ಶೈಕ್ಷಣಿಕ ಸಾಲಿನ ಮೊದಲ ಅವೃತ್ತಿಯಲ್ಲಿ (ಜುಲೈ) ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿತೇರ್ಗಡೆಯಾಗಿಅರ್ಹರಾದ ವಿದ್ಯಾರ್ಥಿಗಳು ಸದರಿಅವೃತ್ತಿಯಲ್ಲಿ ವ್ಯಾಸಂಗಕ್ಕೆ ಪ್ರವೇಶಾತಿ ಪಡೆಯಲು ತೊಂದರೆಯಾದ ಪಕ್ಷದಲ್ಲಿ ಎರಡನೇಅವೃತ್ತಿಯಲ್ಲಿ (ಜನವರಿ) ಮತ್ತೊಮ್ಮೆ ಸಾಮಾನ್ಯ ಪ್ರವೇಶ ಪರೀಕ್ಷೆ ತೆಗೆದುಕೊಳ್ಳದೆ ಅದೇ ಸಾಲಿನ ಮೊದಲ ಅವೃತ್ತಿಯ ಸಾಮಾನ್ಯ ಪ್ರವೇಶ ಪರೀಕ್ಷೆ ಅರ್ಹತೆಯ ಮೇಲೆ ಎರಡನೇಅವೃತ್ತಿಯಲ್ಲಿ (ಜನವರಿ) ಪ್ರವೇಶಾತಿ ಪಡೆಯಲು ಅವಕಾಶ ಕಲ್ಪಿಸಲು ಸಿಂಧುತ್ವ (Validity) ಅವಧಿ ವಿಸ್ತರಿಸುವ ಬಗ್ಗೆ.
2. ವಿದ್ಯಾರ್ಥಿಗಳು ಒಂದು ಶೈಕ್ಷಣಿಕ ಸಾಲಿನ ಮೊದಲ ಅವೃತ್ತಿಯಲ್ಲಿ (ಜುಲೈ) ಸಾಮಾನ್ಯ ಪ್ರವೇಶ ಪರೀಕ್ಷೆಗೆಶುಲ್ಕ ಪಾವತಿಸಿ ನೋಂದಾಯಿಸಿಕೊಂಡು ವೈಯಕ್ತಿತ ಕಾರಣಗಳಿಂದ ಪ್ರವೇಶ ಪರೀಕ್ಷೆಗೆ ಹಾಜರಾಗದಿದ್ದ ಪಕ್ಷದಲ್ಲಿ, ಅಂತಹ ವಿದ್ಯಾರ್ಥಿಗಳು ಎರಡನೇಅವೃತ್ತಿಯಲ್ಲಿ (ಜನವರಿ) ಉಚಿತವಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಳ್ಳಲು ಪಾವತಿಶುಲ್ಕಕ್ಕೆರಿಯಾಯಿತಿ ನೀಡುವ ಸಂಬಂಧ.

ಈ ಮೇಲಿನ ಅಂಶಗಳ ಬಗೆಗೆ ಶೈಕ್ಷಣಿಕ ಮಂಡಳಿಯ ಸಾಮಾನ್ಯ ಸಭೆ, ಹಣಕಾಸು ಸಮಿತಿ ಸಭೆ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕೆ ವಿಷಯ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**<u>ತೀರ್ಮಾನ:</u> ಎಂ.ಬಿ.ಎ ಸಾಮಾನ್ಯ ಪ್ರವೇಶ ಪರೀಕ್ಷೆಯ ಶುಲ್ಕದ ಸಿಂಧುತ್ವ ಅವಧಿಯನ್ನು 1+1 ಅವಧಿಗೆ ವಿಸ್ತರಿಸುವಂತೆ ಸಭೆಯು ಅನುಮೋದಿಸಿತು ಹಾಗೂ ಸದರಿ ವಿಷಯವನ್ನು ಹಣಕಾಸು ಸಮಿತಿ ಮತ್ತು ವ್ಯವಸ್ಥಾಪನಾ ಮಂಡಳಿಯ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 54.10**

ವಿಷಯ: ಬಿ.ಬಿ.ಎ. ಕಾರ್ಯಕ್ರಮದ ಅಧ್ಯಾದೇಶದ ಬಗೆಗೆ.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಬಿ.ಬಿ.ಎ ಕಾರ್ಯಕ್ರಮ ಅರಂಭಿಸಲು ಉದ್ದೇಶಿಸಿದ್ದು, ಬಿ.ಬಿ.ಎ ಕಾರ್ಯಕ್ರಮದ ಅಧ್ಯಾದೇಶದ ಕರಡನ್ನು ಸಿದ್ದಪಡಿಸಲಾಗಿದೆ.

ಸದರಿ ಅಧ್ಯಾದೇಶವನ್ನು ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿಯ ಸಭೆಯ ಅನುಮೋದನೆ ಪಡೆಯಲು, ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**<u>ತೀರ್ಮಾನ:</u> ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಬಿ.ಬಿ.ಎ ಕಾರ್ಯಕ್ರಮ ಅರಂಭಿಸಲು ಉದ್ದೇಶಿಸಿದ್ದು, ಬಿ.ಬಿ.ಎ ಕಾರ್ಯಕ್ರಮದ ಅಧ್ಯಾದೇಶದ ಕರಡನ್ನು ಅನುಮೋದಿಸಿತು ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.**

ಕುಲಪತಿಗಳು ಕುಲಸಚಿವರು

**ವಿಷಯ ಸಂಖ್ಯೆ:54.11**

ವಿಷಯ: ಡಾ.ಎ.ಎಸ್.ಮಧುರಾ, ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು-06 ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸುವ ಬಗೆಗೆ.

******

**ಡಾ. ಎ.ಎಸ್.ಮಧುರಾ**, ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು-06ಇವರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸಲು ದಿನಾಂಕ: 19-02-2020ರಂದುಜರುಗಿದಇಂಗ್ಲಿಷ್ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸ್ನಾತಕೋತ್ತರಅಧ್ಯಯನ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಸದರಿಯವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸಲುಶಿಫಾರಸ್ಸು ಮಾಡಲುಕೋರಿದ್ದು, ಅಧ್ಯಯನ ಮಂಡಳಿ ಸದಸ್ಯರು ಸಭೆಯಲ್ಲಿ ಸದರಿಯವರ ಪಿಹೆಚ್.ಡಿ ಮಾರ್ಗದರ್ಶನದಅರ್ಜಿಯನ್ನು ಪರಿಶೀಲಿಸಿ, ವಿಶ್ವವಿದ್ಯಾನಿಲಯದ ಪಿಹೆಚ್.ಡಿಅಧ್ಯಾದೇಶ-2019ರ ಷರತ್ತು 10.3 ಅಂಶವನ್ನುಅಭ್ಯರ್ಥಿಯು ಪೂರೈಸಿರುವುದರಿಂದ ಮತ್ತುಯುಜಿಸಿಅಧ್ಯಾದೇಶ-2016ರ ನಿಯಮಗಳನ್ನು ಪೂರೈಸಿರುವುದರಿಂದಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಇಂಗ್ಲಿಷ್ ವಿಷಯದ ಪಿಹೆಚ್.ಡಿ. ಮಾರ್ಗದರ್ಶಕರನ್ನಾಗಿ ಪರಿಗಣಿಸಬಹುದೆಂದುಶಿಫಾರಸ್ಸು ಮಾಡಿ ನಡಾವಳಿಯಲ್ಲಿದಾಖಲಿಸಿದೆ.ಸದರಿ ಪ್ರತಿಯನ್ನುಡೀನ್ (ಶೈಕ್ಷಣಿಕ) ವಿಭಾಗಕ್ಕೆ ನೀಡಿರುತ್ತಾರೆ.**ಅನುಬಂಧ** (ಆ) ನಲ್ಲಿ ಪ್ರತಿ ಲಗತ್ತಿಸಿದೆ.

ಡಾ. ಎ.ಎಸ್.ಮಧುರಾರವರಿಗೆ ಸಂಬಂಧಿಸಿದಂತೆ BOS ಸದಸ್ಯರು ಇಂಗ್ಲಿಷ್ ವಿಷಯದಪಿಹೆಚ್.ಡಿ ಮಾರ್ಗದರ್ಶನಕ್ಕೆಅಂಗೀಕರಿಸಬಹುದೆಂಬ ಶಿಫಾರಸ್ಸು ನೀಡಿರುವುದರಿಂದ ಸದರಿ ಪ್ರಾಧ್ಯಾಪಕರನ್ನು ಪಿಹೆಚ್.ಡಿಮಾರ್ಗದರ್ಶಕರನ್ನಾಗಿ ಪರಿಗಣಿಸುವ ಸಂಬಂಧ ವಿಷಯವನ್ನುಶೈಕ್ಷಣಿಕ ಮಂಡಳಿಯ ಸಾಮಾನ್ಯ ಸಭೆಮತ್ತು ವ್ಯವಸ್ಥಾಪನ ಮಂಡಳಿಯ ಸಭೆಗಳಲ್ಲಿಚರ್ಚೆ ಮತ್ತು ನಿರ್ಣಯಕ್ಕೆ ವಿಷಯವನ್ನು ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**ತೀರ್ಮಾನ: ಡಾ.ಎ.ಎಸ್.ಮಧುರಾ, ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು, ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸುವ ಸಂಬಂಧದ ವಿಷಯವನ್ನು ಶೈಕ್ಷಣಿಕ ಮಂಡಳಿಯು, ಅನುಮೋದಿಸಿತು ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿಗೆ ಮಂಡಿಸಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ 54.12**

**ವಿಷಯ:**-2019-20 ನೇ ಶೈಕ್ಷಣಿ ಸಾಲಿನ ಪ್ರಥಮ ಮತ್ತು ದ್ವಿತೀಯ ಎಂ.ಎ/ಎಂ.ಕಾಂ ವಿದ್ಯಾರ್ಥಿಗಳಿಗೆ ಸಂಪರ್ಕಕಾರ್ಯಕ್ರಮಗಳ ಭತ್ಯೆಗಳು ಹಾಗೂ ಸಂಭಾವನೆಯ ಬಗೆಗೆ.

ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2019-20 ನೇ ಶೈಕ್ಷಣಿಕ ಸಾಲಿನ ಕ.ರಾ.ಮು.ವಿ. ಯ ಪ್ರಥಮ ಮತ್ತು ದ್ವಿತೀಯ ಎಂ.ಎ/ಎಂ.ಕಾಂ ವಿದ್ಯಾರ್ಥಿಗಳಿಗೆ ಸಂಪರ್ಕ ಕಾರ್ಯಕ್ರಮಗಳು ನಡೆಯುತ್ತಿದ್ದು,

**ಕುಲಪತಿಗಳು** **ಕುಲಸಚಿವರು**

ಸದರಿ ಸಂಪರ್ಕ ಕಾರ್ಯಕ್ರಮದಲ್ಲಿ ಭಾಗವಹಿಸುವ ಆಂತರಿಕ ಅಧ್ಯಾಪಕರುಗಳು, ಬಾಹ್ಯ ಅಧ್ಯಪಕರುಗಳು ಹಾಗೂ ಸಂಪರ್ಕಕಾರ್ಯಕ್ರಮದ ಸಂಯೋಜನಾಧಿಕಾರಿಯಾಗಿರುವ ಪ್ರಾದೇಶಿಕ ನಿರ್ದೇಶಕರಗಳಿಗೆ ಭತ್ಯೆಗಳನ್ನು ಪಾವತಿಸಬೇಕಾಗಿರುವ ಹಿನ್ನಲೆಯಲ್ಲಿ ಪಾವತಿಗೆಅರ್ಹವಾಗಿರುವಮೊತ್ತವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋಧನೆ ಪಡೆಯಬೆಕಾಗಿರುತ್ತದೆ. ಆದ್ದರಿಂದ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಚರ್ಚೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

**ಸಂಪರ್ಕ ಕಾರ್ಯಕ್ರಮಗಳ ಭತ್ಯೆಗಳ ಹಾಗೂ ಸಂಭಾವನೆಯ ವಿವರ**

| | | |
|---|---|---|
| 1. | ಸಂಪರ್ಕಕಾರ್ಯಕ್ರಮ ನಡೆಯುವ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಆಸನದ ವ್ಯವಸ್ಥೆ ಹಾಗೂ ಕೊಠಡಿ ಬಾಡಿಗೆ ದಿನವೊಂದಕ್ಕೆ ಪ್ರತಿಕೊಠಡಿಗೆ<br>250 ರಿಂದ 300 ವಿದ್ಯಾರ್ಥಿಗಳ ಆಸನ ಹೊಂದಿರುವದೊಡ್ಡಕೊಠಡಿಗೆ | ಸಾಮಾನ್ಯ ಕೊಠಡಿಗೆ ರೂ. 350/–<br>ದೊಡ್ಡ ಕೊಠಡಿಗೆ ರೂ. 450 |
| 2. | ಸಂಪರ್ಕಕಾರ್ಯಕ್ರಮದ ಸಂಯೋಜನಾಧಿಕಾರಿಯಾಗಿರುವ ಪ್ರಾದೇಶಿಕ ನಿರ್ದೇಶಕರ ಸಂಭಾವನೆ | ದಿನವೊಂದಕ್ಕೆ ರೂ. 600/– |
| 3. | ಕ.ರಾ.ಮು.ವಿ ಅಧ್ಯಾಪಕರುಗಳಿಗೆ 'ವಿಷಯ ಸಂಯೋಜಕರಭತ್ಯೆ" ದಿನವೊಂದಕ್ಕೆ ಮೈಸೂರುಕೇಂದ್ರ ಹೊರತುಪಡಿಸಿ ಹೊರಗಿನ ಕೇಂದ್ರಗಳಿಗೆ ಮಾತ್ರ | ರೂ. 700/– |
| 4. | ಕ.ರಾ.ಮು.ವಿಅಧ್ಯಾಪಕರನ್ನು ಹೊರತುಪಡಿಸಿ ಹೊರಗಿನ ಅಧ್ಯಾಪಕರುಗಳಿಗೆ ಒಂದು ಗಂಟೆಯ ಅವಧಿಯ ಉಪನ್ಯಾಸಕ್ಕೆ ಗೌರವ ಸಂಭಾವನೆ | ರೂ. 750/– |
| 5. | ಸಂಪರ್ಕಕಾರ್ಯಕ್ರಮ ನಡೆಯುವ ಕೇಂದ್ರಗಳಲ್ಲಿ ಸಹಾಯಕ್ಕಾಗಿ ದಿನಗೂಲಿ ಆಧಾರದ ಮೇಲೆ ನಿಯೋಜನೆ ಮಾಡಿಕೊಳ್ಳುವ ಒಬ್ಬಗುಮಾಸ್ತರಿಗೆ ದಿನವೊಂದಕ್ಕೆಗೌರವ ಸಂಭಾವನೆ ಒಬ್ಬ ನಾಲ್ಕನೇ ದರ್ಜೆ ನೌಕರನಿಗೆ ದಿನವೊಂದಕ್ಕೆ ಗೌರವ ಸಂಭಾವನೆ | ರೂ. 150/–<br>ರೂ. 100/– |
| 6. | ಸ್ಥಳೀಯ ಭತ್ಯೆ ಬೆಂಗಳೂರಿಗೆ ಮಾತ್ರ (ಬಾಹ್ಯಅಧ್ಯಾಪಕರಿಗೆ ಮಾತ್ರ)<br>ಬೇರೆ ಕೇಂದ್ರಗಳಿಗೆ (ಬಾಹ್ಯಅಧ್ಯಾಪಕರಿಗೆ ಮಾತ್ರ) | ರೂ. 400/–<br>ರೂ. 300/– |
| 7. | ಸಂಪರ್ಕ ಕಾರ್ಯಕ್ರಮದಲ್ಲಿ ಭಾಗವಹಿಸುವ ಕ.ರಾ.ಮು.ವಿಯ ಅಧ್ಯಾಪಕರ ಪ್ರಯಾಣ ಭತ್ಯೆ ಪ್ರತಿ ಕಿ.ಮೀ. ಗೆ | ರೂ. 6/– |
| 8. | ದಿನ ಭತ್ಯೆ | ಕೆ.ಸಿ.ಎಸ್.ಆರ್. ನಿಯಮಾನುಸಾರ |

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**<u>ತೀರ್ಮಾನ:</u> ವಿಶ್ವವಿದ್ಯಾನಿಲಯವು 2019–20ನೇ ಶೈಕ್ಷಣಿಕ ಸಾಲಿನ ಪ್ರಥಮ/ದ್ವಿತಿಯ ಎಂ.ಎ/ಎಂ.ಕಾಂ ವಿದ್ಯಾರ್ಥಿಗಳಿಗೆ ಸಂಪರ್ಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಸದರಿ ಸಂಪರ್ಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಆಂತರಿಕ ಅಧ್ಯಾಪಕರುಗಳು, ಬಾಹ್ಯ ಅಧ್ಯಾಪಕರುಗಳು ಹಾಗೂ ಸಂಪರ್ಕ ಕಾರ್ಯಕ್ರಮದ ಸಂಯೋಜನಾಧಿಕಾರಿಯಾಗಿರುವ ಪ್ರಾದೇಶಿಕ ನಿರ್ದೇಶಕರುಗಳಿಗೆ ಭತ್ಯೆಗಳನ್ನು ಪಾವತಿಸಬೇಕಾಗಿರುವ ಹಿನ್ನಲೆಯಲ್ಲಿ ಪಾವತಿಗೆ ಅರ್ಹವಾಗಿರುವ ಮೊತ್ತವನ್ನು ಪಾವತಿಸಲು ಸಭೆಯು ಅನುಮೋದಿಸಿತು.**

ಕುಲಪತಿಗಳು                                    ಕುಲಸಚಿವರು

**ವಿಷಯ ಸಂಖ್ಯೆ: 54.13**

ವಿಷಯ: 2020-2021ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಉದ್ದೇಶಿಸಿರುವ Online Programmes ಗಳ ಅಧ್ಯಾದೇಶದ ಅನುಮೋದನೆ ಬಗ್ಗೆ

****

ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಯುಜಿಸಿ ಆಶಯದಂತೆ 2020-2021ನೇ ಶೈಕ್ಷಣಿಕ ಸಾಲಿನಿಂದOnline Programmesಗಳನ್ನು ಪ್ರಾರಂಭಿಸಲು ಉದ್ದೇಶಿಸಿದ್ದು, ಸದರಿ ಕಾರ್ಯಕ್ರಮಗಳ ಪ್ರಾರಂಭಕ್ಕೆ ವಿ.ವಿಯಕಾಯ್ದೆ, ಸೆಕ್ಷನ್24ರ ಪ್ರಕಾರ ಕಾರ್ಯಕ್ರಮಗಳ ರೂಪರೇಷೆಗಳನ್ನು ಕ್ರೋಢೀಕರಿಸಿ,"Ordinance relating to Online Programmes at KSOU"ಸಿದ್ಧಪಡಿಸಲಾಗಿದ್ದು ಕರಾಮುವಿಯಲ್ಲಿನ ಶೈಕ್ಷಣಿಕ ಸೌಲಭ್ಯಗಳು ಹಾಗು ಪರಿಣಿತರನ್ನು ಉಪಯೋಗಿಸಿಕೊಂಡು ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ಪಡೆಯಬೇಕಾಗಿದೆ.

ಉದ್ದೇಶಿತ Online Programmes ನಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ :

| ಕ್ರ. ಸಂ. | ಶೈಕ್ಷಣಿಕ ಕಾರ್ಯಕ್ರಮಗಳ ವಿವರ |
|---|---|
| 1 | ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳು |
| 2 | ಸ್ನಾತಕ ಪದವಿ ಕಾರ್ಯಕ್ರಮಗಳು |
| 3 | ಸ್ನಾತಕೋತ್ತರಡಿಪ್ಲೊಮಾ ಕಾರ್ಯಕ್ರಮಗಳು |
| 4 | ಡಿಪ್ಲೊಮಾ ಕಾರ್ಯಕ್ರಮಗಳು |
| 5 | ಸರ್ಟಿಫಿಕೇಟ್ ಕಾರ್ಯಕ್ರಮಗಳು |

Online Programmesಗಳಿಗೆ ಸಂಬಂಧಿಸಿದಅಧ್ಯಾದೇಶದಕರಡು ಪ್ರತಿಯನ್ನು ಶೈಕ್ಷಣಿಕ ಮಂಡಳಿ ಸಭೆ ಮತ್ತು ವ್ಯವಸ್ಥಾಪನ ಮಂಡಳಿ ಸಭೆಅನುಮೋದನೆಗೆ ಮಂಡಿಸಿದೆ.

**<u>ತೀರ್ಮಾನ:</u> 2020-21ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಉದ್ದೇಶಿಸಿರುವ Online Programmeಗಳ ಅಧ್ಯಾದೇಶದ ಕರಡು ಪ್ರತಿಗೆ ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು. ಪ್ರಸ್ತುತ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ:54.14**

ವಿಷಯ: 2020-21ನೇ ಶೈಕ್ಷಣಿಕ ಸಾಲಿನ ಜೂನ್/ ಜುಲೈಆವರ್ತನದಲ್ಲಿ ಹೊಸದಾಗಿ Diploma in "General Studies" (DGS) ಶಿಕ್ಷಣಕ್ರಮವನ್ನು ಪ್ರಾರಂಭಿಸುವ ಬಗ್ಗೆ.

****

ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ**2020-21ನೇ ಶೈಕ್ಷಣಿಕ ಸಾಲಿನ ಜೂನ್/ ಜುಲೈಆವರ್ತನದಲ್ಲಿ ಹೊಸದಾಗಿDiploma in "General Studies" (DGS)**ಶಿಕ್ಷಣಕಾರ್ಯಕ್ರಮವನ್ನು ಪ್ರಾರಂಭಿಸುವಸಲುವಾಗಿ, **"Draft Regulation Governing the one year Diploma in General Studies (DGS) programme of**

ಕುಲಪತಿಗಳು

ಕುಲಸಚಿವರು

**KSOU"** ಅನ್ನುಸಿದ್ಧಪಡಿಸಿ ದಿನಾಂಕ: 10-03-2020 ಮತ್ತು 11-03-2020 ರಂದು ನಡೆದ ಅಧ್ಯಯನ ಮಂಡಳಿಯ ಸಭೆಯಲ್ಲಿಕೈಗೊಂಡ ನಿರ್ಣಯದಂತೆಅನುಮೋ ದನೆ ಪಡೆಯಲಾಗಿರುತ್ತದೆ. (BOSನಡಾವಳಿ ಪ್ರತಿ ಲಗತ್ತಿಸಿದೆ)

ಪ್ರಸ್ತುತ, **DGS** ಶಿಕ್ಷಣಕಾರ್ಯಕ್ರಮವನ್ನು2020-21ನೇ ಶೈಕ್ಷಣಿಕ ಸಾಲಿನ ಜೂನ್/ ಜುಲೈಆವರ್ತನದಲ್ಲಿ ಪ್ರಾರಂಭಿಸಲು ಶೈಕ್ಷಣಿಕ ಮಂಡಳಿ ಸಭೆಯ ಮತ್ತು ವ್ಯವಸ್ಥಾಪನ ಮಂಡಳಿ ಸಭೆಯಲ್ಲಿಚರ್ಚೆ ಮತ್ತು ನಿರ್ಣಾಯಕ್ಕಾಗಿ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**<u>ತೀರ್ಮಾನ:</u> ವಿಶ್ವವಿದ್ಯಾನಿಲಯವು ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ 2020-21ನೇ ಸಾಲಿನ ಜೂನ-ಜುಲೈ ಆರ್ವತನದಲ್ಲಿ ಹೊಸದಾಗಿ Diploma in "General Studies" (DGS) ಶಿಕ್ಷಣ ಕಾರ್ಯಕ್ರಮವನ್ನು ಪ್ರಾರಂಭಿಸಲು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು ಹಾಗೂ ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ:54.15**

ವಿಷಯ: ಕರಾಮುವಿಯಲ್ಲಿ ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಮತ್ತು ಅದರ ಅಡಿಯಲ್ಲಿ PG Diploma in Women's Studies ಶಿಕ್ಷಣ ಕಾರ್ಯಕ್ರಮ ಪ್ರಾರಂಭಿಸಲು ಅನುಮೋದನೆ ನೀಡುವ ಬಗ್ಗೆ.

****

ಕರಾಮುವಿಯಲ್ಲಿ ಯುಜಿಸಿ ಆಶಯದಂತೆ ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ ಅದರಡಿಯಲ್ಲಿ PG Diploma in Women's Studies ಶಿಕ್ಷಣ ಕಾರ್ಯಕ್ರಮವನ್ನು 2020-21ನೇ ಸಾಲಿನ ಜೂನ್-ಜುಲೈ ಆವರ್ತನದಲ್ಲಿ ಪ್ರಾರಂಭಿಸಲು ವಿಷಯವನ್ನು ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**ತೀರ್ಮಾನ: ಕರಾಮುವಿಯಲ್ಲಿ ಯುಜಿಸಿ ಆಶಯದಂತೆ ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ ಅದರಡಿಯಲ್ಲಿ PG Diploma in Women's Studies ಶಿಕ್ಷಣ ಕಾರ್ಯಕ್ರಮವನ್ನು 2020-21ನೇ ಸಾಲಿನ ಜುಲೈ ಆವರ್ತನದಲ್ಲಿ ಪ್ರಾರಂಭಿಸಲು ಸಭೆಯು ಅನುಮೋದಿಸಿತು ಮತ್ತು ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.**

ಕುಲಪತಿಗಳು | ಕುಲಸಚಿವರು

**ವಿಷಯ ಸಂಖ್ಯೆ:54.16**

ವಿಷಯ: ವಿಜ್ಞಾನ ಶಿಕ್ಷಣಕಾರ್ಯಕ್ರಮಗಳಿಗೆ ರಚಿತವಾಗಿರುವ ಅಧ್ಯಯನ ಮಂಡಳಿಗಳ ಅನುಮೋದನೆ ಬಗ್ಗೆ.

****

ವಿಶ್ವವಿದ್ಯಾನಿಲಯದ ಪರಿನಿಯಮ-II ರನ್ವಯ ರಚಿತವಾಗಿದ್ದ ಕೆಲವು ಅಧ್ಯಯನ ಮಂಡಳಿಗಳ ಅವಧಿ ಪೂರ್ಣವಾಗಿದ್ದ ಹಿನ್ನಲೆಯಲ್ಲಿ ಹಾಗು 2020-21ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ವಿಜ್ಞಾನ ವಿಷಯಗಳ ಅಧ್ಯಯನ ಮಂಡಳಿ ರಚಿಸಿ ಶೈಕ್ಷಣಿ ಕಚಟುವಟಿಕೆ ನಿರ್ವಹಣೆಗಾಗಿ ಈ ಮುಂದಿನ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಯನ ಮಂಡಳಿಗಳನ್ನು ರಚಿಸಿ ಕಚೇರಿ ಆದೇಶ ಹೊರಡಿಸಲಾಗಿದೆ.

<u>ರಚಿತವಾಗಿರುವ ಅಧ್ಯಯನ ಮಂಡಳಿಗಳ ವಿವರ :</u>

| ಕ್ರ. ಸಂ. | ಅಧ್ಯಯನ/ ಸಂಶೋಧನಾ ವಿಭಾಗ | ಅಧ್ಯಯನ ಮಂಡಳಿ | ಅವಧಿ |
|---|---|---|---|
| 01 | ಭೌತಶಾಸ್ತ್ರಅಧ್ಯಯನ ವಿಭಾಗ | ಸಂಯುಕ್ತಅಧ್ಯಯನ ಮಂಡಳಿ (UG, PG) | 10-03-2020 ರಿಂದ 09-03-2023 |
| 02 | ಸಸ್ಯಶಾಸ್ತ್ರಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಂಯುಕ್ತಅಧ್ಯಯನ ಮಂಡಳಿ (UG, PG) | 04-03-2020 ರಿಂದ 03-03-2023 |
| 03 | ಪ್ರಾಣಿಶಾಸ್ತ್ರಅಧ್ಯಯನ ವಿಭಾಗ ಮತ್ತು ಸಂಶೋಧನಾ ವಿಭಾಗ | ಸಂಯುಕ್ತಅಧ್ಯಯನ ಮಂಡಳಿ (UG, PG) | 04-03-2020 ರಿಂದ 03-03-2023 |

ಸದರಿ ಅಧ್ಯಯನ ಮಂಡಳಿಗಳು ರಚಿತಗೊಂಡಿದ್ದು ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆಯಲು ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

<u>ತೀರ್ಮಾನ:</u> **ವಿಶ್ವವಿದ್ಯಾನಿಲಯದ ಪರಿನಿಯಮ-II ರನ್ವಯ ರಚಿತವಾಗಿದ್ದ ಕೆಲವು ಅಧ್ಯಯನ ಮಂಡಳಿಗಳ ಅವಧಿ ಪೂರ್ಣಗೊಂಡಿದ್ದರ ಹಿನ್ನಲೆಯಲ್ಲಿ ಹಾಗು 2020-21ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ವಿಜ್ಞಾನ ವಿಷಯಗಳ ಅಧ್ಯಯನ ಮಂಡಳಿ ರಚಿಸಿ, ಶೈಕ್ಷಣಿಕ ಚಟುವಟಿಕೆ ನಿರ್ವಹಣೆಗಾಗಿ ಈ ಮುಂದಿನ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಯನ ಮಂಡಳಿಗಳನ್ನು ರಚಿಸಿ, ಕಚೇರಿ ಆದೇಶ ಹೊರಡಿಸಲಾಗಿರುವ ಆದೇಶಳಿಗೆ ಶೈಕ್ಷಣಿಕ ಮಂಡಳಿ ಸಭೆಯು ಅನುಮೋದನೆ ನೀಡಿತು ಹಾಗೂ ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.**

ಕುಲಪತಿಗಳು

ಕುಲಸಚಿವರು

**ವಿಷಯ ಸಂಖ್ಯೆ: 54.17**

ವಿಷಯ: ಕರಾಮುವಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ಚಟುವಟಿಕೆಗಳಿಗೆ ಪೂರಕ ಸೌಲಭ್ಯವನ್ನುಕಲ್ಪಿಸುವ ಬಗ್ಗೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆತಯಾರಿ ನಡೆಸುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪ್ರತ್ಯೇಕ ಗ್ರಂಥಾಲಯ ಹಾಗು ಪೂರಕ ಶೈಕ್ಷಣಿಕ ಸೌಲಭ್ಯಗಳನ್ನು ಒಳಗೊಂಡ 24/7 ಅಧ್ಯಯನ ಕೊಠಡಿ (Reading Room) ಸ್ಥಾಪಿಸುವ ಬಗ್ಗೆ ಹಾಗು ಸದರಿಕೇಂದ್ರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕ ತಯಾರಿ ಕಾರ್ಯಕ್ರಮಗಳನ್ನು ನಿಯಮಿತವಾಗಿ ಆಯೋಜಿಸುವ ಬಗೆಗಿನ ವಿಷಯವನ್ನು ಶೈಕ್ಷಣಿಕ ಮಂಡಳಿಯ ಸಾಮಾನ್ಯ ಸಭೆ ಮತ್ತು ವ್ಯವಸ್ಥಾಪನ ಮಂಡಳಿಯ ಸಭೆಗಳಲ್ಲಿ ಚರ್ಚೆ ಮತ್ತು ನಿರ್ಣಯಕ್ಕೆ ವಿಷಯವನ್ನು ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**<u>ತೀರ್ಮಾನ</u>: ಕರಾಮುವಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ಚಟುವಟಿಕೆಗಳಿಗೆ ಪೂರಕ ಸೌಲಭ್ಯವನ್ನು ಕಲ್ಪಿಸುವದಕ್ಕೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ರೂ.50.00ಲಕ್ಷ ಗಳನ್ನು ಬಜೆಟ್‌ನಲ್ಲಿ ಕಾಯ್ದಿರಿಸಲು ಅನುಮೋದಿಸಿತು ಮತ್ತು ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ:54.18**

ವಿಷಯ: All-in-One display screen and Projector ಗಳನ್ನು ಅಧ್ಯಯನ ವಿಭಾಗಗಳ ಬಳಕೆಗೆ ಖರೀದಿಸುವ ಬಗ್ಗೆ.

* * * *

ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಮತ್ತು ವಿಶ್ವವಿದ್ಯಾನಿಲಯದ ಎಲ್ಲಾ ಪ್ರಾದೇಶಿಕ ಕೇಂದ್ರಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು/ಪಾಠಪ್ರವಚನಗಳನ್ನು ನೀಡಲು ಅನುವಾಗುವಂತೆ All-in-One display screen and Projector ಗಳ ಅವಶ್ಯಕತೆಇರುತ್ತದೆ. ಈ ಹಿನ್ನೆಲೆಯಲ್ಲಿ ನಿಯಮಾನುಸಾರಖರೀದಿ ಪ್ರಕ್ರಿಯೆಯನ್ನು ನಡೆಸಲುಒಪ್ಪಿಗೆ ನೀಡಬೇಕಾಗಿದೆ.

ಈ ಸಂಬಂಧವಾಗಿ ಶೈಕ್ಷಣಿಕ ಮಂಡಳಿಯ ಸಾಮಾನ್ಯ ಸಭೆ,ಹಣಕಾಸು ಸಮಿತಿ ಸಭೆ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿಚರ್ಚೆ ಮತ್ತು ನಿರ್ಣಯಕ್ಕೆ ವಿಷಯ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**ತೀರ್ಮಾನ: ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಎಲ್ಲಾ ಆಡಳಿತಾತ್ಮಕ ವಿಭಾಗಗಳು ಮತ್ತು ಎಲ್ಲಾ ಪ್ರಾದೇಶಿಕ ಕೇಂದ್ರಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು/ಪಾಠಪ್ರವಚನಗಳನ್ನು ನೀಡಲು ಅನುವಾಗುವಂತೆ All-in-One display screen and Projector ಗಳ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ನಿಯಮಾನುಸಾರ ಖರೀದಿ ಪ್ರಕ್ರಿಯೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮೋದಿಸಲಾಯಿತು ಹಾಗೂ ಸದರಿ ವಿಷಯವನ್ನು ಹಣಕಾಸು ಸಮಿತಿಗೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.**

ಕುಲಪತಿಗಳು — ಕುಲಸಚಿವರು

**ವಿಷಯ ಸಂಖ್ಯೆ:54.19**

ವಿಷಯ: 2020–21 ರ ಶೈಕ್ಷಣಿಕ ಸಾಲಿನಿಂದ Online ಶೈಕ್ಷಣಿಕ ಕಾರ್ಯಕ್ರಮಗಳು ಹಾಗು NMEICTಅಡಿಯಲ್ಲಿ ಬರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗೆಗೆ.

****

ವಿಶ್ವವಿದ್ಯಾನಿಲಯದಲ್ಲಿ 2020–21ರ ಶೈಕ್ಷಣಿಕ ಸಾಲಿನಿಂದ ಯುಜಿಸಿ ನಿರ್ದೇಶನದನ್ವಯ ಮತ್ತು ನಿಯಮಾವಳಿಗಳನ್ವಯ ಈ ಕೆಳಕಂಡ ಉದ್ದೇಶಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗೆಗೆ.

1. Online ಶೈಕ್ಷಣಿಕ ಕಾರ್ಯಕ್ರಮಗಳ ಪ್ರಾರಂಭ, ಮೊದಲ ಹಂತದಲ್ಲಿ ಪ್ರತಿಅಧ್ಯಯನ ವಿಭಾಗದಿಂದಒಂದುಕಾರ್ಯಕ್ರಮ, ತದನಂತರಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳ Online ಅಳವಡಿಕೆಗೆ.
2. The National Mission on Education through Information and Communication Technology (NMEICT)ಅಡಿಯಲ್ಲಿ ಬರುವ ವಿವಿಧ ಕಾರ್ಯಕ್ರಮಗಳನ್ನು ಅಳವಡಿಸುವ ಬಗೆಗೆ.
   (a) ಎಲ್ಲಾ ಸ್ನಾತಕ ಹಾಗು ಸ್ನಾತಕೋತ್ತರ ಶೈಕ್ಷಣಿಕ ವಿಷಯಗಳಲ್ಲಿ SWAYAM ಹಾಗು MOOCನ ಅಳವಡಿಕೆ.
   (b) SWAYAM Prabha ಯೋಜನೆಯಡಿಯಲ್ಲಿಎಲ್ಲಾ ಸ್ನಾತಕ ಹಾಗು ಸ್ನಾತಕೋತ್ತರ ಶೈಕ್ಷಣಿಕ ಪಠ್ಯಕ್ರಮಗಳನ್ನು ಆಧರಿಸಿದ ವಿಡಿಯೋಕಾರ್ಯಕ್ರಮ ನಿರ್ಮಾಣ.
   (c) e-Yantra ಯೋಜನೆಯಾಧಾರಿತ ಕಲಿಕಾ ಅವಕಾಶಗಳ ಅಳವಡಿಕೆ.
   (d) ಸ್ನಾತಕ ಹಾಗು ಸ್ನಾತಕೋತ್ತರ ವಿಷಯಗಳಿಗೆ Virtual Lab ಆಧರಿಸಿದ ಕಲಿಕೆಗೆ ಅವಕಾಶ ಕಲ್ಪಿಸುವುದು.
   (e) ಶೈಕ್ಷಣಿಕ ವಿಭಾಗಗಳಲ್ಲಿ Open Sourceತಂತ್ರಾಂಶಗಳ ಅಳವಡಿಕೆ ಮತ್ತು ಬಳಕೆ.
   (f) Spoken Tutorialವಿಧಾನದ ಅಳವಡಿಕೆ.
   (g) NDLIಅಳವಡಿಕೆ ಮತ್ತುಬಳಕೆ.
   (h) e-SS ಅಳವಡಿಕೆ ಮತ್ತುಬಳಕೆ.
   (i) Plagiarism Detection Softwareನ ಬಳಕೆ ಮತ್ತು ಅಳವಡಿಕೆ.
   (j) ERP-SAMARTHನ ಅಳವಡಿಕೆ ಮತ್ತುಬಳಕೆ.
   (k) RIMS ನಅಳವಡಿಕೆ ಮತ್ತುಬಳಕೆ.

ಈ ಸಂಬಂಧವಾಗಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆಯುವ ನಿಟ್ಟಿನಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

**<u>ತೀರ್ಮಾನ:</u> 2020–21 ರ ಶೈಕ್ಷಣಿಕ ಸಾಲಿನಿಂದ Online ಶೈಕ್ಷಣಿಕ ಕಾರ್ಯಕ್ರಮಗಳು ಹಾಗು NMEICTಅಡಿಯಲ್ಲಿ ಬರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕೆ ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು ಹಾಗೂ ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.**

**ಕುಲಪತಿಗಳು** **ಕುಲಸಚಿವರು**

**ವಿಷಯ ಸಂಖ್ಯೆ:54.20**

ವಿಷಯ: Choice Based Credit System (CBCS) ಹಾಗು Online programmesಗಳಿಗೆ ಅನುಗುಣವಾಗಿ ವಿಶ್ವವಿದ್ಯಾನಿಲಯದ ಶೈಕ್ಷಣಿಕಅಧ್ಯಯನ ಸಾಮಗ್ರಿಗಳನ್ನು ಹೊಸದಾಗಿ ಸಿದ್ಧಪಡಿಸಲು ಬರವಣಿಗೆ, ತಿದ್ದುಪಡಿ, ಸಂಪಾದನೆ, ಭಾಷಾಂತರ ಇತ್ಯಾದಿಗಳಿಗೆ ಸಂಭಾವನೆ ನಿಗದಿಪಡಿಸುವ ಬಗ್ಗೆ.

****

ಯುಜಿಸಿ 2017ರ ನಿಯಮಾವಳಿ ಅನ್ವಯ ವಿಶ್ವವಿದ್ಯಾನಿಲಯದಲ್ಲಿ Choice Based Credit System (CBCS) ಹಾಗು Online programme ಗಳನ್ನು ಅನ್ನು ಅಳವಡಿಸಿಕೊಂಡು ಹೊಸದಾಗಿ ಸ್ನಾತಕ/ ಸ್ನಾತಕೋತ್ತರ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ರಚಿಸಲು ಈಗಾಗಲೇ ಅಧ್ಯಾದೇಶವನ್ನು ರಚಿಸಿದ್ದು, ನಿಯಮಾನುಸಾರ ಅನುಮೋದನೆಗೆ ಕ್ರಮವಹಿಸಲಾಗಿರುತ್ತದೆ. Choice Based Credit System (CBCS) ಹಾಗು Online programmes ಗಳನ್ನು ನಲ್ಲಿಅಧ್ಯಯನ ಸಾಮಗ್ರಿಗಳನ್ನು ರಚಿಸಲು ಈ ಹಿಂದೆ SLM ಬರವಣಿಗೆಯ ಪ್ರತಿಯುನಿಟ್‌ಗೆ ನಿಗದಿಪಡಿಸಿದ್ದ ಸಂಭಾವನೆ ಮೊತ್ತವು ತುಂಬಾ ಕಡಿಮೆಯಾಗಿದ್ದು, ಬಾಹ್ಯ ವಿಷಯ ತಜ್ಞರು ಸದರಿ ಸಂಭಾವನೆಗೆ ಉತ್ಕೃಷ್ಟವಾದ ಬರವಣಿಗೆ ನೀಡಲು ಅಸಾಧ್ಯವೆಂಬ ಚರ್ಚೆಯು ದಿನಾಂಕ: 02-03-2020 ರಂದು ನಡೆದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಮುಖ್ಯಸ್ಥರ ಸಭೆಯಲ್ಲಿ ವ್ಯಕ್ತವಾಗಿರುತ್ತದೆ. ಹಾಗಾಗಿ, Choice Based Credit System (CBCS)ನ ಪದ್ಧತಿಯಲ್ಲಿ ಅಧ್ಯಯನ ಸಾಮಗ್ರಿಗಳನ್ನು ರಚಿಸುವ ಸಂಬಂಧ ಈ ಮುಂದಿನಂತೆ ಸಂಭಾವನೆ ನಿಗದಿಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

| ಕ್ರ. ಸಂ. | ವಿವರ | ನಿಗದಿಪಡಿಸಬಹುದಾದ ಸಂಭಾವನೆ (ಪ್ರತಿಯೂನಿಟ್‌ಗೆ) ರೂ. | ನಿರ್ಣಯಿಸಿದ ಮೊತ್ತ |
|---|---|---|---|
| 1 | ಯುಜಿಸಿ ನಿಯಮದನ್ವಯ ಪ್ರತಿ ಯೂನಿಟ್‌ಗೆ (CBCS) ಪದ್ಧತಿಯಲ್ಲಿ ಬರವಣಿಗೆ | 10,000/- | 8,500/- |
| 2 | ಯುಜಿಸಿ ನಿಯಮಾನುಸಾರ Online ಕಾರ್ಯಕ್ರಮಗಳಿಗೆ Four Quadrant ಮಾದರಿಯಲ್ಲಿ ಘಟಕಗಳ ತಯಾರಿಕೆ | 10,000/- | 8,500/- |
| 3 | ಘಟಕಗಳ ಸಂಪಾದನೆ (Editing) | 4,000/- | 2,500/- |
| 4 | ಭಾಷಾಂತರ (Translation) | 6,000/- | 6,000/- |
| 5 | ಸಂಕಲನ (Compilation) | 4,000/- | 4,000/- |
| 6 | ಕರಡುತಿದ್ದುಪಡಿ :(Proof reading) | 1,000/- | 1,000/- |
| 7 | ಡಿಟಿಪಿ ನಲ್ಲಿ ಪ್ರತಿ ಪುಟಕ್ಕೆ<br>1. ಕನ್ನಡ -<br>2. ಇಂಗ್ಲಿಷ್ -<br>3. ಹಿಂದಿ -<br>4. ಉರ್ದು-<br>5. ತೆಲುಗು - | <br>25/-<br>20/-<br>40/-<br>40/-<br>40/- | 25/-<br>20/-<br>40/-<br>40/-<br>40/- |
| 8 | ಪರಾಮರ್ಶನೆ (Revision) | 3,000/- | 3,000/- |
| 9 | ರೇಡಿಯೊ ಸ್ಕ್ರಿಪ್ಟ್ (15 ನಿಮಿಷಕ್ಕೆ) | 2,000/- | 2,000/- |
| 10 | ವೀಡಿಯೊ ಸ್ಕ್ರಿಪ್ಟ್ (15 ನಿಮಿಷಕ್ಕೆ) | 3,000/- | 3,000/- |
| 11 | ರೇಡಿಯೊ ವಿಷಯತಜ್ಞರ ಭಾಗವಹಿಸುವಿಕೆ (15 ನಿಮಿಷಕ್ಕೆ) | 2,000/- | 2,000/- |
| 12 | ವೀಡಿಯೊ ವಿಷಯತಜ್ಞರ ಭಾಗವಹಿಸುವಿಕೆ (15 ನಿಮಿಷಕ್ಕೆ) | 3,000/- | 3,000/- |
| 13 | ಚಾರ್ಟ್‌ಗಳು - ಪ್ರತಿಯೊಂದಕ್ಕೆ | 100/- | 100/- |
| 14 | ರೇಖಾ ಚಿತ್ರಗಳು - ಪ್ರತಿಯೊಂದಕ್ಕೆ | 300/- | 300/- |
| 15 | ಗ್ರಾಫಿಕ್‌ಗಳು - ಪ್ರತಿಯೊಂದಕ್ಕೆ | 300/- | 300/- |

ಕುಲಪತಿಗಳು

ಕುಲಸಚಿವರು

ಪ್ರಸ್ತಾವನೆಯ ಸಂಭಾವನೆಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಮಂಡಳಿಯಲ್ಲಿ ಚರ್ಚಿಸಿ ನಿರ್ಣಯಿಸಬಹುದಾದ ಸಂಭಾವನೆಯನ್ನು ನಿಗದಿಪಡಿಸಲು/ ತೀರ್ಮಾನಿಸಲು ವಿಷಯವನ್ನು ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆ, ಹಣಕಾಸು ಸಮಿತಿ ಮತ್ತು ವ್ಯವಸ್ಥಾಪನಾ ಮಂಡಳಿಗೆ ಮಂಡಿಸಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು.

ತೀರ್ಮಾನ: ಯುಜಿಸಿ 2017ರ ನಿಯಮಾವಳಿ ಅನ್ವಯ ವಿಶ್ವವಿದ್ಯಾನಿಲಯದಲ್ಲಿ **Choice Based Credit System (CBCS)** ಹಾಗು **Online programmes**ಗಳನ್ನು ಅನ್ನು ಅಳವಡಿಸಿಕೊಂಡು ಹೊಸದಾಗಿ ಸ್ನಾತಕ/ ಸ್ನಾತಕೋತ್ತರ ಶಿಕ್ಷಣಕ್ರಮಗಳ ಅಧ್ಯಯನ ಸಾಮುಗ್ರಿಗಳನ್ನು ರಚಿಸಲು ಮೇಲಿನ ಕೋಷ್ಟಕದಲ್ಲಿ ನೀಡಲಾಗಿರುವ ವಿವರಗಳಂತೆ ಪಠ್ಯ ಬರವಣಿಗೆ, ಸಂಪಾದನೆ, ಕರಡಚ್ಚು ತಿದ್ದುವಿಕೆ, ಭಾಷಾಂತರ ಮತ್ತು ಇತರೆ ವೆಚ್ಚಗಳ ಸಂಭಾವನೆ ನಿಗದಿಪಡಿಸಲು ತೀರ್ಮಾನಿಸಿದೆ. ಸದರಿ ವಿಷಯವನ್ನು ಹಣಕಾಸು ಸಮಿತಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:54.21**

ವಿಷಯ: 2019–20ನೇ ಶೈಕ್ಷಣಿಕ ಸಾಲಿನ ಸ್ನಾತಕ/ಸ್ನಾತಕೋತ್ತರ ಡಿಪ್ಲೋಮಾ ಕೋರ್ಸ್ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುವ ಮಾದರಿಯನ್ನು ಅನುಮೋದಿಸುವ ಬಗ್ಗೆ.

****

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ಎಲ್ಲಾ ಶೈಕ್ಷಣಿಕ ಸಾಲುಗಳಲ್ಲಿ ನಡೆಯುವ ಸ್ನಾತಕ/ಸ್ನಾತಕೋತ್ತರ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವ ಸಲುವಾಗಿ ಆಯಾಯ ಪರೀಕ್ಷಾ ಮಂಡಳಿ/ವಿಶ್ವವಿದ್ಯಾನಿಲಯವು ನೀಡುವ ಪ್ರಶ್ನೆ ಪತ್ರಿಕೆಯ ಮಾದರಿ ಹಾಳೆಗಳಲ್ಲಿ ಮಾತ್ರ ಪ್ರಶ್ನೆಗಳನ್ನು ಕೈ ಬರಹದಲ್ಲಿ ಮಾತ್ರ ಸಿದ್ಧಪಡಿಸಿ ಪಡೆಯುವ ಸಲುವಾಗಿ ಶೈಕ್ಷಣಿಕ ಮಂಡಳಿ ಮುಂದೆ ಅನುಮೋದನೆಗಾಗಿ ವಿಷಯ ಮಂಡಿಸಲಾಗಿದೆ. ಮಾದರಿಯನ್ನು ಅನುಬಂಧ–ಅ ನಲ್ಲಿ ಮಂಡಿಸಲಾಗಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಳ್ಳಲಾಯಿತು

ತೀರ್ಮಾನ: ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ಶೈಕ್ಷಣಿಕ ಎಲ್ಲಾ ಸಾಲುಗಲ್ಲಿ ನಡೆಯುವ ಸ್ನಾತಕ/ಸ್ನಾತಕೋತ್ತರ ಡಿಪ್ಲೋಮಾ ಕೋರ್ಸ್ ಮತ್ತು **Certificate Course** ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವ ಮಾದರಿಯನ್ನು ಒಪ್ಪಿದೆ ಹಾಗೂ ಪ್ರತಿ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಲು ಕನ್ನಡ ಮತ್ತು ಇಂಗ್ಲೀಷ ಆವೃತ್ತಿಯಲ್ಲಿ ರೂ.700/–ಗಳ ಸಂಭಾವನೆಯನ್ನು ನಿಗದಿಪಡಿಸಿದೆ. ಪ್ರತಿ ಪ್ರಶ್ನೆ ಪತ್ರಿಕೆಯೊಂದಿಗೆ ಸ್ಕೀಮ್ ಸಲ್ಲಿಸುವುದುನ್ನು ಕಡ್ಡಾಯಗೊಳಿಸಲು ತೀರ್ಮಾನಿಸಲಾಯಿತು.

ಅಂತಿಮವಾಗಿ 54ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ, ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಪತಿಗಳು ಹಾಗೂ ಅಧ್ಯಕ್ಷರು

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು